# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು

ಸಂಖ್ಯೆಸ.ಇಂ/ವಾ–144/ವಾರ್ಡ್ ಸಭೆ/2020–21 ದಿನಾಂಕ:16/01/2021

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ದಿನಾಂಕ:16/01/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144–ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಆರ್. ಕೊಟ್ರೇಶ್‌ನಾಯಕ್ | ಸಹಾಯಕ ಅಭಿಯಂತರರು ವಾರ್ಡ್–144– ಸಿದ್ದಾಪುರ | ಹಾಜರಿದ್ದರು |
| 3 | ಶ್ರೀ. ಕೆ.ಎಲ್. ನಾಗರಾಜ | ಸಹಾಯಕ ಅಭಿಯಂತರರು BESCOM | ಹಾಜರಿದ್ದರು |
| 4 | ಶ್ರೀ. ಆರ್. ರಾಘವೇಂದ್ರ | ಕಂದಾಯ ವಸೂಲಿಗಾರರು ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 5 | ಶ್ರೀಮತಿ. ಸುರೇಖ | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| 6 | ಶ್ರೀ. ನರಸಿಂಹಪ್ಪ | ಮೇಲ್ವಿಚಾರಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| 7 | ಶ್ರೀಮತಿ. ನಾಗರತ್ನ | ಹೊಂದಾಣಿಕೆ ಕೆಲಸಗಾರರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| ಕ್ರಮ ಸಂಖ್ಯೆ | ಮಾಜಿ ಸದಸ್ಯರ ಹೆಸರು | ಪದನಾಮ | ಹಾಜರಾತಿ |
| 1 | ಶ್ರೀಮತಿ. ಮರಗತವಳ್ಳಿ | ಮಾಜಿ ಸದಸ್ಯರು | ಹಾಜರಿದ್ದರು |

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಅಶೋಕ್ ಜಿ. | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ತೇಜಸ್ ಎ. ಗೌಡ | ಸ್ಥಳೀಯರು | ಹಾಜರಿದ್ದರು |

ಮ.ತಿ.ನೋ..



Scanned with CamScanner

| | | | |
|---|---|---|---|
| 5 | ಶ್ರೀ. ಬಿ.ಎಂ. ದೋರೈರಾಜ್ | ಸ್ಥಳೀಯರು | ಹಾಜರಿದ್ದರು |
| 6 | ಶ್ರೀ. ಜಯರಾಮ್ ಎಂ.ಜಿ | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ಪುನಿತ್‌ಕುಮಾರ್ | ಸ್ಥಳೀಯರು | ಹಾಜರಿದ್ದರು |
| 8 | ಶ್ರೀ. ಪ್ರೇಮ್‌ಕುಮಾರ್ | ಸ್ಥಳೀಯರು | ಹಾಜರಿದ್ದರು |
| 9 | ಶ್ರೀ. ಕೆಂಪರಾಜು ಓ. | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಹಾಜರಿದ್ದ ಶ್ರೀ. **ಜಯರಾಮ್** ಎಂ.ಜಿ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ 6ನೇ ಅಡ್ಡರಸ್ತೆ, ಗುಟ್ಟೇಪಾಳ್ಯದಲ್ಲಿ ಬಾಗಿರುವ ಕಂಬವನ್ನು ತೆರವುಗೊಳಿಸಲು ಮತ್ತೊಮ್ಮೆ ಕೋರಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. **ಜಯರಾಮ್** ಎಂ.ಜಿ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಸಮತಾವಾದ ಶಾಲೆ ಎದುರು ವಾಹನಗಳನ್ನು ತೆರವುಗೊಳಿಸಲು ಮತ್ತೊಮ್ಮೆ ಕೋರಿದರು ಆದರೆ ಸಂಚಾರ ಪೊಲೀಸ್ ಅಧಿಕಾರಿಗಳು ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. **ಜಯರಾಮ್** ಎಂ.ಜಿ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಶ್ರೀರಾಮ ದೇವಸ್ಥಾನದ ಹತ್ತಿರ ಹಾಗೂ ರಾಘವೇಂದ್ರ ಕಾಲೋನಿ ಮುಖ್ಯರಸ್ತೆಯಲ್ಲಿ BWSSB ವತಿಯಿಂದ ನಿರ್ಮಿಸಿರುವ ಚೇಂಬರ್‌ಗಳಲ್ಲಿ ಒಳಚರಂಡಿ ನೀರು ಉಕ್ಕಿ ಹರಿಯುತ್ತಿದ್ದು, ಹಾಗೂ ಸದರಿ ರಸ್ತೆಗಳಲ್ಲಿ ಒಳಚರಂಡಿ ಕೊಳವೆಗಳನ್ನು ಮತ್ತೊಮ್ಮೆ ಅಳವಡಿಸಲು ಕೋರಿದರು ಇಂದಿನ ಸಭೆಗೆ BWSSB ಅಧಿಕಾರಿಗಳು ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. **ಜಯರಾಮ್** ಎಂ.ಜಿ ರವರು ಮಾತನಾಡಿ ಚೇಂಬರ್‌ನಿಂದ ತೆಗೆದು ಮಧ್ಯ ರಸ್ತೆಗೆ ಹಾಕಿರುವ ಮಣ್ಣನ್ನು ತೆರವುಗೊಳಿಸಲು ಕೋರಿದರು. ಇಂದಿನ ಸಭೆಗೆ BWSSB ಅಧಿಕಾರಿಗಳು ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ. **ಜಯರಾಮ್** ಎಂ.ಜಿ ರವರು ಮಾತನಾಡಿ ಡಯಾಲಿಸಿಸ್ ಸೆಂಟರ್‌ನಿಂದ ರಸ್ತೆಗೆ ನೀರು ಬರದಂತೆ ಸರಿಪಡಿಸಲು ಕೋರಿದರು. ಈ ವಿಷಯಗಾಗಿ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ಈ ಬಗ್ಗೆ ಶೀಘ್ರವಾಗಿ ಕ್ರಮ ವಹಿಸಲು ಸೂಚಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಶ್ರೀ. ಜಯರಾಮ್ ಎಂ.ಜಿ ರವರು ಮಾತನಾಡಿ ಸೋಮೇಶ್ವರ ಮುಖ್ಯರಸ್ತೆಯಲ್ಲಿ ಈಗಾಗಲೆ ಬಿಬಿಎಂಪಿ ವತಿಯಿಂದ ಅಂದವಾದ ಪಾದಚಾರಿ ಮಾರ್ಗವನ್ನು ಸುಂದರೀಕರಣಗೊಳಿಸಲಾಗಿದ್ದು, ಈ ಮುಖ್ಯರಸ್ತೆಯಲ್ಲಿ ಈಗಾಗಲೇ ಸಾಕಷ್ಟು ವಹನಗಳು ಎರಡೂ ಬದಿಯಲ್ಲಿ ನಿಂತಿರುವುದರಿಂದ ಪಾಲಿಕೆಯ ವತಿಯಿಂದ ನಿರ್ಮಿಸಿರುವ ಪಾದಚಾರಿ ಮಾರ್ಗ ಸುಂದರತೆ ಕಾಣದಾಗಿರುತ್ತದೆ ಹಾಗೂ ನಿಮಾನ್ಸ್ ತುರ್ತು ಪರಿಸ್ಥಿತಿ ಆಸ್ಪತ್ರೆಗೆ ತೆರಳುವ ಆಂಬುಲೆನ್ಸ್‌ಗಳಿಗೆ ಹಾಗೂ ಸಾರ್ವಜನಿಕರ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಆದರೆ ಇಂದಿನ ಸಭೆಗೆ ಸಂಚಾರ ವಿಭಾಗದ ಪೋಲೀಸ್ ಅಧಿಕಾರಿಗಳು ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ ಶ್ರೀ. ಸುರೇಶ್ ಹೆಚ್.ಕೆ ರವರು ಈ ಸಭೆಯಲ್ಲಿ ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ಗುಟ್ಟೇಪಾಳ್ಯದ ಶೆಟ್ಟಿ ಅಂಗಡಿ ಹತ್ತಿರ ಹಾಳಾಗಿರುವ ಸಿ.ಸಿ. ಕ್ಯಾಮರಾಗಳನ್ನು ಸರಿಪಡಿಸಲು ಮತ್ತೊಮ್ಮೆ ತಿಳಿಸಿದರು ಆದರೆ ಇಂದಿನ ಸಭೆಯಲ್ಲಿ ಪಾಲಿಕೆಯ ವಿದ್ಯುತ್ ವಿಭಾಗದ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.
- ಸ್ಥಳೀಯರಾದ ಶ್ರೀ. ಸುರೇಶ್ ಹೆಚ್.ಕೆ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ಡಾ||. ಬಿ.ಆರ್. ಅಂಬೇಡ್ಕರ್ ಕಾಲೋನಿ ಹಾಗೂ ಸೋಮೇಶ್ವರ ಮುಖ್ಯರಸ್ತೆಯ ನಿಮ್ಹಾನ್ಸ್ ಕಾಂಪೌಂಡ್ ಹತ್ತಿರ ಬಾಗಿರುವ ಕಂಬಗಳನ್ನು ತೆರವುಗೊಳಿಸಲು ಮತ್ತೊಮ್ಮೆ ಕೋರಿದರು. ಈ ವಿಷಯವಾಗಿ ಇಂದಿನ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳು ಬಗ್ಗೆ ಕ್ರಮ ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ ಶ್ರೀ. ಅಶೋಕ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಪಾಲಿಕೆಯ ಸ್ವತ್ತುಗಳಾದ ಬಾಸ್ಕೆಟ್ ಬಾಲ್ ಮೈದಾನ, ಹೌಸಿಂಗ್ ಬೋರ್ಡ್ ಕಾಲೋನಿ ಪ್ರದೇಶದ ರಾಜಕಾಲುವೆ ಮತ್ತು ವಾರ್ಡ್ ಕಛೇರಿಯ ಹತ್ತಿರ ಇರುವ ಖಾಲಿ ಚಿಕ್ಕ ಮೈದಾನ ಮತ್ತು ಇತರೆ ಪಾಲಿಕೆಯ ಜಾಗಗಳ ಬಗ್ಗೆ ಪಾಲಿಕೆಯ ಜಾಗಗಳೆಂದು ಗುರುತಿಸಿ ನಾಮಫಲಕ ಅಳವಡಿಸಲು ಕೋರಿದರು. ಅದರಂತೆ ಅಧ್ಯಕ್ಷರು ಉತ್ತರಿಸಿ ಸಹಾಯಕ ಕಂದಾಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ಈ ಬಗ್ಗೆ ಕೂಡಲೇ ಕ್ರಮ ವಹಿಸುವಂತೆ ವಾರ್ಡಿ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ ಶ್ರೀ. ಮಂಜುನಾಥ್ ರವರು ಮಾತನಾಡಿ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದ ಹತ್ತಿರ ಎರಡು ಬೀದಿ ದೀಪಗಳನ್ನು ಅಳವಡಿಸಲು ಮತ್ತೊಮ್ಮೆ ಕೋರಿದರು ಆದರೆ ಪಾಲಿಕೆಯ ವಿದ್ಯುತ್ ವಿಭಾಗದ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.
- ಸ್ಥಳೀಯರಾದ ಶ್ರೀ. ತೇಜಸ್ ಎ. ಗೌಡ ರವರು ಮಾತನಾಡಿ ಘನತ್ಯಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಯಸ್ಸಾದ ಕೆಲಸಗಾರರನ್ನು ತೆಗೆದು ಹಾಕಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಉತ್ತರಿಸಿ ಘನತ್ಯಾಜ್ಯ ವಿಭಾಗದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಈ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

ಮ.ತಿ.ನೋ..



Scanned with CamScanner

- ಸ್ಥಳೀಯರಾದ ಶ್ರೀ. ತೇಜಸ್ ಎ. ಗೌಡ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ರಸ್ತೆಗಳಿಗೆ ಪಾಲಿಕೆ ವತಿಯಿಂದ ಸರ್ಕಾರದ ಅಧಿಸೂಚನೆಯಂತೆ ನಾಮಫಲಕಗಳನ್ನು ಅಳವಡಿಸುವಂತೆ ಮತ್ತು ನಾಮಫಲಕಗಳಲ್ಲಿ ಯಾವುದೇ ಲೋಕಸಭಾ/ವಿಧಾನಸಭಾ/ಪಾಲಿಕೆಯ ಸದಸ್ಯರ ಹೆಸರುಗಳನ್ನು ನಮೂದಿಸಿದಂತೆ ಕ್ರಮ ವಹಿಸಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಪಾಲಿಕೆಯ ನಿಯಮಾನುಸಾರ ಕ್ರಮ ವಹಿಸುವಂತೆ ವಾರ್ಡಿನ ಅಭಿಯಂತರರಿಗೆ ಸಭೆಯಲ್ಲಿ ಸೂಚಿಸಿದರು.
- ಸ್ಥಳೀಯರಾದ ಶ್ರೀ. ತೇಜಸ್ ಎ. ಗೌಡ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಕೊಳಚೆ ಪ್ರದೇಶಗಳಿಗೆ ಕೊಳಚೆ ಪ್ರದೇಶ ಎಂದು ಕರೆಯುವ ಬದಲಾಗಿ ನಗರ ಎಂದು ಕರೆಯುವುದು ಸೂಕ್ತ ಎಂದು ಅಭಿಪ್ರಾಯ ತಿಳಿಸಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಈ ವಿಷಯವಾಗಿ ವರದಿಯನ್ನು ಮೇಲಾಧಿಕಾರಿಗಳಿಗೆ ಮಂಡಿಸಲು ವಾರ್ಡಿನ ಸಹಾಯಕ ಅಭಿಯಂತರರಿಗೆ ಸಭೆಯಲ್ಲಿ ಸೂಚಿಸಿದರು.
- ಸ್ಥಳೀಯರಾದ ಶ್ರೀ. ಕೆಂಪರಾಜು ಓ. ರವರು ಮಾತನಾಡಿ 5ನೇ ಅಡ್ಡರಸ್ತೆಯಲ್ಲಿ ವಿದ್ಯುತ್ ಕಂಬ ಕೈಗೆಟುಕುವಷ್ಟು ಹತ್ತಿರಕ್ಕೆ ಇದ್ದು, ಇದರಿಂದ ಸ್ಥಳೀಯರಿಗೆ ತೊಂದರೆಯಾಗುವುದಾಗಿ ತಿಳಿಸಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಕೂಡಲೇ ಕ್ರಮ ವಹಿಸಲು ಬೆಸ್ಕಾಂ ಅಭಿಯಂತರರಿಗೆ ಸೂಚಿಸಿದರು.
- ಸ್ಥಳೀಯರಾದ ಶ್ರೀ. ಕೆಂಪರಾಜು ಓ. ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಇರುವ ಖಾಲಿ ಜಾಗಗಳಲ್ಲಿ ಆಸ್ಪತ್ರೆಗಳು, ಬ್ಯಾಂಕ್‌ಗಳು ಹಾಗೂ ಇನ್ನಿತರೆ ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಪಾಲಿಕೆ ವತಿಯಿಂದ ನಿರ್ಮಿಸಿ ಕ್ರಮ ಕೈಗೊಳ್ಳಲು ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಕ್ರಮ ವಹಿಸಲು ವಾರ್ಡಿನ ಸಹಾಯಕ ಅಭಿಯಂತರರಿಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

16/1/21.

(ಆರ್. ಕೊಟ್ರೇಶ್‌ನಾಯಕ್)
ಕಾರ್ಯದರ್ಶಿ
ವಾರ್ಡ್-144 ಸಿದ್ದಾಪುರ

16/01/21

(ನ[illegible]ರಾವ್)
ನೋಡಲ್ ಅಧಿಕಾರಿ
ವಾರ್ಡ್-144 ಸಿದ್ದಾಪುರ



Scanned with CamScanner